**ಅಸಲು ದಾವಾ ನಂಃ 10/2013**
**ಪಿ.ಡಬ್ಲ್ಯೂ: -02**

**ದಿನಾಂಕಃ 29.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಡಿ.ಸಿ., ಪ್ರತಿವಾದಿ ಪರ ವಕೀಲರಿಂದ**

ಸರ್ವೇ ನಂಬರ್ಃ 98 ರಲ್ಲಿ 2 ನೇ ಪೋಡಿನಲ್ಲಿ 2 ಎಕರೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಪಹಣಿ ನನ್ನ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ಚಂದ್ಲಿಬಾಯಿ ಯವರಿಂದ ನನ್ನ ಹೆಸರಿಗೆ ಬಂದಿರುತ್ತದೆ. ಸದರಿ ಜಮೀನಿನ ದಕ್ಷಿಣಕ್ಕೆಃ ತಳಕು- ನಾಯಕನಹಟ್ಟಿ ರಸ್ತೆ ಬರುತ್ತದೆ ಎಂದರೆ ಸರಿ. ಉತ್ತರಕ್ಕೆಃ ಗಿಡ್ಡಚಂದ್ರನಾಯಕನ ಜಮೀನು ಬರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆಃ ರಾಧಾನಯಕನ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಪೂರ್ವಕ್ಕೆಃ ಲೋಕ್ಯಾನಾಯಕನ ಜಮೀನು ಇದೆ ಎಂದರೆ ಸರಿಯಲ್ಲ.

ಲಲಿತಬಾಯಿ ಕೋಂ ಲೇಟ್ ಲಚ್ಮಾನಾಯಕ ಎಂದರೆ ನಾನೇ ಆಗಿರುತ್ತೇನೆ. ಮೇಲೆ ಹೇಳಿದಂತಹ ಚಕ್ಕುಬಂಧಿಯಲ್ಲಿರುವ ಜಮೀನು ನನ್ನ ಗಂಡ ಹಾಗೂ ನನ್ನ ಅತ್ತೆಯಿಂದ ನನ್ನ ಹೆಸರಿಗೆ ಬಂದಿದ್ದು, ಸದರಿ ಜಮೀನಿನ ಮೇಲೆ ಗಜ್ಜುಗಾನಹಳ್ಳಿ ಸೊಸೈಟಿಯಲ್ಲಿ ಸಾಲ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಮೇಲಿನ ಜಮೀನಿನ ಪಕ್ಕದಲ್ಲಿ ತಿಪ್ಪೇಸ್ವಾಮಿ ಬಿನ್ ವಾಚ್ಯಾನಾಯಕ ಇವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ.

ಲೋಕ್ಯಾನಾಯಕನ ಹೆಂಡತಿ ಗುಜರಿಬಾಯಿ ಎಂಬ ಮಹಿಳೆ ನಮ್ಮ ಊರಿನಲ್ಲಿ ಇರುತ್ತಾರೆ ಎಂದರೆ ಸರಿ. ಸದರಿ ಲೋಕ್ಯಾನಾಯಕನಿಗೆ ಸೇರಿದ ಜಮೀನು ಸರ್ವೇ ನಂಬರ್ ಃ 98/2 ರಲ್ಲಿ 4 ಎಕರೆ ಜಮೀನು ಅವರಿಗೆ ಇರುತ್ತದೆ ಎಂದರೆ ಸರಿಯಲ್ಲ. ಲೋಕ್ಯಾನಾಯಕ ರವರು ಲಚ್ಮಾನಾಯಕನ ಅಣ್ಣ ಎಂದರೆ ಸರಿಯಲ್ಲ.

**ಅಸಲು ದಾವಾ ನಂಃ 10/2013**
**ಪಿ.ಡಬ್ಲ್ಯೂಃ -02**

ನನ್ನ ಗಂಡ ಲಚ್ಮ್ಯಾನಾಯಕನಿಗೆ ಒಟ್ಟು 2 ಜನ ಸಹೋದರರು ಎಂದರೆ ಸರಿಯಲ್ಲ. ಲಚ್ಮ್ಯಾನಾಯಕನ ತಂದೆ ಕಾಳ್ಯಾನಾಯಕ ಅಂತ ಇದ್ದು, ಸದರಿ ಕಾಳ್ಯಾನಾಯಕನ ಹೆಂಡತಿಯ ಹೆಸರು ಚಾಂದ್ಲಿಬಾಯಿ ಎಂದರೆ ಸರಿಯಲ್ಲ. ನನ್ನ ಗಂಡ ಲಚ್ಮ್ಯಾನಾಯಕನ ಸಹೋದರರ ಹೆಸರು 1) ಲೋಕ್ಯಾನಾಯಕ, 2) ಭದ್ರಾನಾಯಕ ಎಂದರೆ ಸರಿಯಲ್ಲ.

ಭದ್ರಾನಾಯಕನ ಹೆಂಡತಿ ಲಕ್ಷ್ಮೀಬಾಯಿ ಎಂದರೆ ಸರಿಯಲ್ಲ. ಕಾಳ್ಯಾನಾಯಕನ ವಂಶಕ್ಕೆ ಸೇರಿದ ಜಮೀನು ಮತ್ತು ಮನೆ ನಮ್ಮ ಊರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ.

ಪ್ರತಿವಾದಿಯವರು ಲಚ್ಮ್ಯಾನಾಯಕನ ವಂಶಸ್ಥರು ಎಂದರೆ ಸರಿಯಲ್ಲ. ಲಚ್ಮ್ಯಾನಾಯಕನ ಹೆಂಡತಿಯ ಹೆಸರು ಕೀಸ್ಲಿಬಾಯಿ ಎಂದರೆ ಸರಿ. ಸದರಿಯವರಿಗೆ 3 ಜನ ಗಂಡು ಮಕ್ಕಳು ಎಂದರೆ ಸರಿ. ಅವರುಗಳೆಂದರೆ 1) ರಾಂಜೀ ನಾಯ್ಕ, 2) ನಂದ್ಯಾನಾಯ್ಕ್, 3) ಚಂದ್ರಾನಾಯ್ಕ ಅಂತ ಇರುತ್ತದೆ ಎಂದರೆ ಸರಿ. 1) ರಾಂಜೀ ನಾಯ್ಕ, 2) ನಂದ್ಯಾನಾಯ್ಕ್, 3) ಚಂದ್ರಾನಾಯ್ಕ ಇವರ ವಂಶಸ್ಥರನ್ನು ನಾನು ಈ ದಾವೆಯ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಊರಿನ ಎಲ್.ಆರ್. ನಾಯ್ಕ ಇವರ ಮನೆಯ ಪಶ್ಚಿಮದ ಕಡೆ ನನ್ನ ಗಂಡನಿಗೆ ಸೇರಿದ ಹಳೆಯ ಮನೆ ಇತ್ತು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸೇರಿದ ಹಳೆಯ ಮನೆ ನಮ್ಮ ಊರಾದ ಜಂಬಯ್ಯನಹಟ್ಟಿಯಲ್ಲಿ ಇರುವುದಿಲ್ಲ. ನಮ್ಮ ಊರಿನ ಎಲ್.ಆರ್. ನಾಯ್ಕ ಇವರ ಮನೆಯ ಪಶ್ಚಿಮದ ಕಡೆ ನನ್ನ ಗಂಡನಿಗೆ ಸೇರಿದ ಹಳೆಯ ಮನೆ ಇದ್ದು ಅದನ್ನು ನನ್ನ ಮಗಳ ಹೆಸರಿಗೆ ಖಾತೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಗ್ರಾಮಪಂಚಾಯಿತಿಯಿಂದ ಹಣದ ಸಹಾಯ ಪಡೆದು ಹಳೆ ಮನೆ ಇದ್ದಲ್ಲಿ ಹೊಸ ಮನೆ ಕಟ್ಟುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಗ್ರಾಮ ಪಂಚಾಯಿತಿಯಿಂದ ಹಣದ ಸಹಾಯ ಪಡೆದಿರುವುದಿಲ್ಲ.

ನಾವು 10 ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ. ನನ್ನ ಗಂಡ ಮೃತರಾಗಿ 10 ವರ್ಷಗಳಾಗಿವೆ. ನನ್ನ ಗಂಡ ತೀರಿಕೊಂಡಾಗ ಸುಮಾರು 60 ವರ್ಷ ವಯಸ್ಸಾಗಿತ್ತು. ಚಂದ್ರಾನಾಯ್ಕನಿಗೆ ಇಬ್ಬರು ಹೆಂಡತಿಯರು ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಚಂದ್ರಾನಾಯ್ಕನಿಗೆ ಕೇವಲ ಒಬ್ಬಳೇ ಹೆಂಡತಿ ಅವರೆಂದರೆ 6ನೇ ಪ್ರತಿವಾದಿ ಲಕ್ಷ್ಮೀಬಾಯಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮೊದಲನೇ ಹೆಂಡತಿ ಚಾಂದ್ಲಿಬಾಯಿ 2ನೇ ಹೆಂಡತಿ ಲಕ್ಷ್ಮೀಬಾಯಿ ಎಂದು ನುಡಿಯುತ್ತಾರೆ. ಚಾಂದ್ಲಿಬಾಯಿ ಗಂಡ ಕಾಳ್ಯಾನಾಯ್ಕ ಎಂದರೆ ಸರಿಯಲ್ಲ. ಚಾಂದ್ಲಿಬಾಯಿ ರವರು ಚಂದ್ರಾನಾಯ್ಕನ ಹೆಂಡತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಂಶವೃಕ್ಷವನ್ನು ಸೃಷ್ಟಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಚಂದ್ರಾನಾಯ್ಕನಿಗೆ ಮೊದಲನೇ ಹೆಂಡತಿ ಚಾಂದ್ಲಿಬಾಯಿ ಅಂತ ಇದ್ದು ಅವರಿಗೆ ಲಚ್ಮಾನಾಯಕ ನೆಂಬ ಮಗನಿದ್ದ ಅಂತ ತೋರಿಸಲು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ನಾನು 3 ಜಮೀನುಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಹಾಕಿರುತ್ತೇನೆ.

**(ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.